ಬಾಲಾಜಿ ಡಿಗ್ರಿಯಲ್ಲಿ ಫಸ್ಟ್‌ಕ್ಲಾಸ್ ಬಂದಾಗ ಎಲ್ಲರಿಗಿಂತ ಆಶ್ಚರ್ಯವಾದದ್ದು, ಅರೆಗತ್ತಲು ಸರಿದು ಬಣ್ಣಗಳ ಬೆಳಕು ಕಣ್ಣೊಳಗೆ ನುಗ್ಗಿದಂತಾಗಿದ್ದು ಅವನಿಗಿಂತ ಅವಳಿಗೇ ಹೆಚ್ಚು. ಅವನು ಮನೆಯಲ್ಲಿ ಮಾತಿಲ್ಲದವನಂತಿದ್ದು ನಿಗೂಢವೆನಿಸಿದ್ದ. ಬೆಳೆಯುವ ಹುಡುಗನ ಮನಸ್ಸಿನ ಲಹರಿಗಳ ಪರಿ ಹಿಡಿಯಲು ಸಾಧ್ಯವೇ? ಸ್ವಚ್ಛಂದವಾದಷ್ಟೂ ಅದಕ್ಕೆ ಒದಗುವ ಬೆಳಕಿನ ಮೆರುಗು, ಕೂಡಿ ಕಲೆತು ಕಸಿಯಾಗುವ ಅವಕಾಶ, ಸದೃಢವಾಗುವ ಆಕಾಂಕ್ಷೆಗಳ ಪದರು ಹೆಚ್ಚಲ್ಲವೆ ಎಂಬ ತಮ್ಮ ನಿಲುವಿಗೆ ಅವನ ನಂತರದ ಮಾಸ್ಟರ್ ಪದವಿಯಲ್ಲಿಯೂ ಉನ್ನತ ಮಟ್ಟ ಸಾಧಿಸಿದ್ದು ಪೂರಕವಾಗಿತ್ತು. ಅನಂತರ ಮುಂದೇನು ಎನ್ನುವುದಕ್ಕೆ ತಮ್ಮಿಬ್ಬರಿಗೂ ಅವನ ಆಲೋಚನೆಯಲ್ಲಿ ಭಾಗವಿರಲಿಲ್ಲ. ಎಂದಿನಿಂದಲೂ ತಾನುಂಟು ಮೂಲೋಕವುಂಟು ಎಂದು ಸಂಪೂರ್ಣ ತನ್ನಿಚ್ಛೆಯಂತೆ ನಡೆಯುವ ಅವನ ಪರಿಪಾಠ ತಿಳಿದು ಹೆಚ್ಚಿನ ಪರಿಶೋಧನೆಗೆ ಪ್ರಯತ್ನಿಸಲಿಲ್ಲ. ಜೊತೆಗೆ ಬೇಕಾದದ್ದನ್ನು ದಕ್ಕಿಸಿಕೊಳ್ಳುವ ಛಲ ಅವನಿಗೆ ಮೊದಲಿನಿಂದಲೂ ಇತ್ತು. ಅವನ ದಿನಚರಿ, ಓಡಾಟ, ತಿರುಗಾಟ, ಗೆಳೆಯರು ಆಸಕ್ತಿಗಳು, ಹವ್ಯಾಸ ಮತ್ತು ಒಟ್ಟಾರೆಯಾಗಿ ಅವನು ಸೃಷ್ಟಿಸಿಕೊಂಡ ಪ್ರಪಂಚದ ಬಗ್ಗೆ ತಿಳಿದದ್ದು ನೂರರಲ್ಲಿ ಹತ್ತರಷ್ಟೂ ಇಲ್ಲ. ಒಮ್ಮೊಮ್ಮೆ ತಮಗಿಂತ ಅವನ ಒಡನಾಡಿಗಳಿಗೆ ಅವನ ಬಗ್ಗೆ ಹೆಚ್ಚು ತಿಳಿದಿರಬಹುದೇ ಎಂಬ ಸಂದೇಹ ಹುಟ್ಟಿದರೂ ಅದನ್ನು ಪರೀಕ್ಷಿಸುವ ಸೂಕ್ತವಾದ ಅವಕಾಶ ಒದಗಿಬರಲಿಲ್ಲ. ಒದಗಿದ ಕೆಲವು ಸಂದರ್ಭಗಳಲ್ಲಿ ಕೇವಲ ಔಪಚಾರಿಕ ಹಾಗೂ ಲೋಕಾಭಿರಾಮದ ವಿಷಯಗಳಿಗಿಂತ ಹೆಚ್ಚು ಮುಂದುವರಿಯಲಿಲ್ಲ. ದೊರಕಿದ ಸಂದರ್ಭಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳದೆ ಹೋದದ್ದಕ್ಕಾಗಿ ಅನಂತರ ಪರಿತಪಿಸಿದ್ದೂ ಉಂಟು.

ಬಾಲಾಜಿಗೆ ಮೈಸೂರುಪಾಕ್ ಚಿಕ್ಕ ವಯಸ್ಸಿನಿಂದಲೂ ಅಚ್ಚುಮೆಚ್ಚು. ಪೂರ್ತಿ ತಯಾರಿಸಿದ ಮೇಲೆ ತಿಂದು ಅಷ್ಟಗಲ ಮುಖ ಮಾಡಿ ಸವಿಯುವುದರ ಜೊತೆಗೆ ತಯಾರಿಸುವ ಪ್ರತಿ ಹಂತವನ್ನು ಇನ್ನಿಲ್ಲದಷ್ಟು ಗಮನಿಸುತ್ತಿದ್ದ. ಕೊನೆಯಲ್ಲಿ ಸರಸೂ ಪಾಕವನ್ನು ತಟ್ಟೆಯಲ್ಲಿ ಹಾಕಿ ಚೌಕಗಳನ್ನಾಗಿ ಸೀಳುವುದಕ್ಕೆ ಉಪಯೋಗಿಸಿದ ಚಾಕು ಒಂದಿಷ್ಟೂ ಅತ್ತಿತ್ತ ಹೋಗದೆ ಸಂಪೂರ್ಣ ನೇರವಾಗಿ ಸ್ಕೇಲ್ ಇಟ್ಟು ಎಳೆದಂತೆ ಚಲಿಸಿದಾಗ ಅದೆಷ್ಟೋ ಸಲ ಅವನು ಚಪ್ಪಾಳೆ ಹೊಡೆದದ್ದುಂಟು. ಆ ತಿಂಡಿಯ ಬಗ್ಗೆ ಅವನಿಗಿದ್ದ ವಿಶೇಷ ಪ್ರೀತಿಗಾಗಿ ಎಂದಿಲ್ಲದಿದ್ದರೂ ಹುಟ್ಟುಹಬ್ಬದ ದಿನ ಅವನಿಗದನ್ನು ಕೊಡುವ ವಿಶೇಷ ಆಸಕ್ತಿ ಸರಸೂಳದ್ದು. ಇಷ್ಟಲ್ಲದೆ ಅವನು ಡಿಗ್ರಿ ಹಾಗೂ ಮಾಸ್ಟರ್ಸ್ ಪರೀಕ್ಷೆಗಳಲ್ಲಿ ಗಳಿಸಿದ ಯಶಸ್ಸಿನ ಸಂತೋಷಕ್ಕಾಗಿ ಅದನ್ನು ಗೆಳೆಯರಿಗೆಲ್ಲ ಕೊಡಲು ಮಾಡಿಕೊಟ್ಟಿದ್ದಳು.

ಮೊದಲೇ ನೆನಪಿಸಿಕೊಂಡು ಸಂಜೆಯಾಗುವುದಕ್ಕಿಂತ ಮುಂಚೆ ಬಸ್‌ಸ್ಟ್ಯಾಂಡ್‌ನ ಹತ್ತಿರವಿದ್ದ 'ಪರಿಮಳ' ಸ್ಟೋರ್ಸ್‌ಗೆ ಹೋಗಿ ಅರ್ಧ ಕೇಜಿ ಕೊಂಡು ತಂದಿದ್ದಳು. ರಾತ್ರಿಯಾದರೆ ಈ ಬೇಸಿಗೆಯಲ್ಲಿ ಗಂಟೆಗಟ್ಟಲೆ ಕರೆಂಟು ಹೋಗಿ ಬೀದಿ ದೀಪಗಳು ಇರುವುದಿಲ್ಲ ಎನ್ನುವ ಆತಂಕದಲ್ಲಿಯೇ ಅದನ್ನು ಮಾಡಿ ಪೂರೈಸಿದ್ದಳು. ಜೊತೆಗೆ ನಾಗೇಂದ್ರನೂ ಟೂರ್ನಮೆಂಟಿನಲ್ಲಿ ಗೆದ್ದಿದ್ದಕ್ಕಾಗಿ ಏರ್ಪಡಿಸಿದ್ದ ಸಮಾರಂಭದಲ್ಲಿ ಭಾಗವಹಿಸಿ ತಡವಾಗಿ ಬರುತ್ತೇನೆಂದು ತಿಳಿಸಿದ್ದ.

ಸರಸೂ ಗ್ಯಾಸ್ ಸ್ಟೌವ್ ಹೊತ್ತಿಸಿ ಅನ್ನಕ್ಕಿಟ್ಟು ಕೆಲವು ಕ್ಷಣ ಕುರ್ಚಿಗೊರಗಿದಳು. ತನ್ನ ಸಂಸಾರ ಎಲ್ಲರಂತಾಗಲಿಲ್ಲ ಎನ್ನುವ ಕೊರಗು ಅವಳಿಗೆ. ಪ್ರತಿಷ್ಠಿತ ಕಂಪನಿಯಲ್ಲಿ ಸಾಕಷ್ಟು ಮೇಲ್ಮಟ್ಟದಲ್ಲಿದ್ದ ರಾಮಚಂದ್ರ ಆಫೀಸಿನಲ್ಲಿಯೇ ತೀವ್ರ ಹೃದಯಾಘಾತದಿಂದ ತೀರಿಕೊಂಡದ್ದು ಅವಳ ಜೀವನದಲ್ಲಿ ಮುಖ್ಯ ತಿರುವು. ಅನುಕಂಪದಿಂದ ಅವಳ ಒಟ್ಟಾರೆ ಯೋಗ್ಯತೆಗೆ ತಕ್ಕ ಕೆಲಸ